# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ಕೆ. ಸುಮನ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 80 ಬಡಗಬೆಟ್ಟು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕೆ.ಸಿ.ಎಸ್(ಸಿ.ಸಿ.ಎ) ನಿಯಮಾವಳಿಗಳು 1957ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಬಗ್ಗೆ ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೆಂಟ್/ ಉಪಲೋಕ್/ಎಂ.ವೈ.ಎಸ್-9001/2017/ಪಿಪಿ, ದಿನಾಂಕ:18.12.2018.

**ಪ್ರಸ್ತಾವನೆ :**

ಈ ಪ್ರಕರಣದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3)ರ ಅಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ,-

ಶ್ರೀ ಯೋಗೇಶ್ ಕೋಟ್ಯಾನ್ ಬಿನ್ ಲೇಟ್ ಕೋಸಾ ಜಿ ಸುವರ್ಣ, ಪಿತ್ರೋಡಿ, ಉದ್ಯವಾರ ಗ್ರಾಮ ಮತ್ತು ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು (1) ಶ್ರೀ ಸುಬ್ರಮಣ್ಯ, ಟೌನ್ ಪ್ಲಾನಿಂಗ್ ಆಥಾರಿಟಿ, ಉಡುಪಿ ಜಿಲ್ಲೆ ಮತ್ತು (2) ಶ್ರೀಮತಿ ಸುಮನ ಕೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, 80 ಬಡಗಬೆಟ್ಟು ಶಿರೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು, (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

**ದೂರಿನ ಸಂಕ್ಷಿಪ್ತ ವಿವರ:**

ಉಡುಪಿ ಜಿಲ್ಲೆ ಉದ್ಯಾವರ ಗ್ರಾಮದಲ್ಲಿ ಸರ್ವೆ.ನಂ.240/1ಎರಲ್ಲಿ ಖಾಸಗಿ ಸಂಸ್ಥೆಯವರು ಬೃಹತ್ ಕಟ್ಟಡ ನಿರ್ಮಿಸುವಾಗ ರಸ್ತೆ ಅತಿಕ್ರಮಣ ಮಾಡಿ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸುವುದರ ಬಗ್ಗೆ ಎಲ್ಲಾ ಇಲಾಖೆಗಳಿಗೆ ಆಕ್ಷೇಪಣೆ ಅರ್ಜಿ ಸಲ್ಲಿಸಿರುತ್ತೇನೆ. ಈವರೆಗೆ ಸಂಬಂಧಪಟ್ಟ ಯಾವುದೇ ಇಲಾಖೆಯಿಂದ ಕೂಡಾ ಅತಿಕ್ರಮಣ ಬಗ್ಗೆ ಸೂಕ್ತ ಕಾನೂನುಕ್ರಮ ಕೈಗೊಂಡಿರುವುದಿಲ್ಲ. ಸಾರ್ವಜನಿಕವಾಗಿ ತೊಂದರೆ ಆಗುವ ರೀತಿಯಲ್ಲಿ ಕಟ್ಟಡ ನಿರ್ಮಿಸಿರುತ್ತಾರೆ. ಮೀನುಗಾರಿಕಾ ರಸ್ತೆ ಮತ್ತು ಜನವಸತಿ ಪ್ರದೇಶ ಚುಲ್ಲಿಕುದ್ರು ಸಂಪರ್ಕ ರಸ್ತೆಯನ್ನು ಅತಿಕ್ರಮಿಸಿ ಕಟ್ಟಡ ಕಟ್ಟಿರುವುದರಿಂದ ಸೂಕ್ತ ಕಾನೂನು ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕಾಗಿ ವಿನಂತಿಸಿರುತ್ತಾರೆ.

ದಿನಾಂಕ:28/09/2016ರಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕಟ್ಟಡ ಮಾಲೀಕರಿಗೆ ನೀಡಿದ ನೋಟೀಸು ಪ್ರತಿ ಸಲ್ಲಿಸಿರುತ್ತಾರೆ. ಸದರಿ ನೋಟೀಸಿನ ನಕ್ಷೆಯಲ್ಲಿ ಸೂಚಿಸಿದಂತೆ ರಸ್ತೆ ಮಾರ್ಜಿನ್ ಸ್ಥಳವನ್ನು ಬಿಡದೆ ಕಟ್ಟಡ ಕಟ್ಟುತ್ತಿರುವುದು ಕಂಡುಬಂದಿದೆ. ಕಾರಣ ತಕ್ಷಣ ಕಾಮಗಾರಿಯನ್ನು ನಿಲ್ಲಿಸಲು ನೋಟೀಸು ನೀಡಿರುತ್ತಾರೆ. ಆಯುಕ್ತರಿಗೆ ನೀಡಿದ ಮನವಿ ಪ್ರತಿ, ನೊಂದಾಯಿತ ನಕ್ಷೆ ಪ್ರತಿ, ದಿನಾಂಕ:01.09.2016ರ ಪಂಚಾಯಿತಿ ನೋಟೀಸು ಪ್ರತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಕೊಟ್ಟ ಮನವಿ ಪತ್ರದ ಪ್ರತಿ, ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರದವರು ದಿನಾಂಕ:09.01.2017ರಂದು ಕಟ್ಟಡ ಮಾಲೀಕರಿಗೆ ನೀಡಿದ ನೋಟೀಸು ಪ್ರತಿಗಳನ್ನು ಸಲ್ಲಿಸಿರುತ್ತಾರೆ.

ತನಿಖಾ ಅವಧಿಯಲ್ಲಿ ಕಂಡುಬಂದ ಅಂಶಗಳು:

(1) ಉಡುಪಿ ಜಿಲ್ಲೆ ಉದ್ಯಾವರ ಗ್ರಾಮದ ಸ.ನಂ.240/1ಎರಲ್ಲಿ ಖಾಸಗಿ ಸಂಸ್ಥೆಯವರು ಬೃಹತ್ ಕಟ್ಟಡ ನಿರ್ಮಿಸುವಾಗ ರಸ್ತೆ ಅತಿಕ್ರಮಣ ಮಾಡಿ, ನಗರಾಭಿವೃದ್ಧಿ ಪ್ರಾಧಿಕಾರದ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸಿದ್ದು, ಎದುರುದಾರರು ಮೀನುಗಾರಿಕಾ ಮತ್ತು ಮೀನು ಉತ್ಪನ್ನ ಸಾಮಗ್ರಿಗಳ ಸಹಕಾರ ಸಂಘ ನಿ., ಪಿತ್ರೋಡಿ, ಉದ್ಯಾವರ ಇವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಿಲ್ಲವೆಂದು ದೂರು ಸಲ್ಲಿಸಿರುತ್ತಾರೆ.

(2) ಸದರಿ ಸ.ನಂ.ಜಮೀನಿನ 1 ಎಕರೆ ಜಮೀನಿನಲ್ಲಿ ಸದರಿ ಸಂಘದವರು ಕಛೇರಿ ಕಟ್ಟಡ (ನೆಲ + 1) ಕಟ್ಟುವ ಉದ್ದೇಶಕ್ಕೆ ಪರವಾನಗಿ ಕೋರಿ ಪಂಚಾಯಿತಿಗೆ ಅರ್ಜಿ ಸಲ್ಲಿಸಿರುತ್ತಾರೆ.

(3) ಸದರಿ ಅರ್ಜಿಯನ್ನು ದಿನಾಂಕ:11.05.2016ರ ಸಾಮಾನ್ಯಸಭೆಯಲ್ಲಿ ಮಂಡಿಸಿದ್ದು ನಗರಾಭಿವೃದ್ಧಿ ಪ್ರಾಧಿಕಾರದ ಮಂಜೂರಾತಿ ನಕ್ಷೆಯಲ್ಲಿನ ನಿಬಂಧನೆಯಂತೆ ಕಟ್ಟಡ ರಚನೆಗೆ ಪಂಚಾಯಿತಿ ಸಾಮಾನ್ಯ ಸಭೆ ನಿರ್ಣಯದಂತೆ ಪರವಾನಗಿಯನ್ನು ಮಂಜೂರು ಮಾಡಲಾಗಿದ್ದು ದಿನಾಂಕ:24.05.2016ರಂದು ಪರವಾನಗಿಯನ್ನು ನೀಡಲಾಗಿರುತ್ತದೆ.

(4) ನಗರಾಭಿವೃದ್ಧಿ ಪ್ರಾಧಿಕಾರದವರು ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ನಿವೇಶನಕ್ಕೆ ಹೊಂದಿಕೊಂಡಿರುವ ರಸ್ತೆಯ ಜಾಗವನ್ನು ಸ್ಥಳೀಯ ಸಂಸ್ಥೆಗೆ ಲಿಖಿತ ಮೂಲಕ ಬಿಟ್ಟು ಕೊಟ್ಟ ನಂತರವೇ ನಕ್ಷೆ ಬಿಡುಗಡೆ ಮಾಡುವ ಕ್ರಮ ಜರುಗಿಸಬೇಕೆಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿರುತ್ತಾರೆ.

(5) ಕಟ್ಟಡವನ್ನು ಕಟ್ಟಲು ಪರವಾನಗಿಯನ್ನು ದಿನಾಂಕ:11.05.2016ರಿಂದ 10.05.2019ರವರೆಗೆ ನೀಡಿದ್ದು, ಸದರಿ ಪರವಾನಗಿಗೆ 2ನೇ ಎದುರುದಾರರ ಸಹಿ ಇರುತ್ತದೆ.

(6) ಸದರಿ ಪರವಾನಗಿಯಲ್ಲಿ ಯಾವುದೇ ಷರತ್ತು ಉಲ್ಲಂಘಿಸಿದ್ದಲ್ಲಿ ಪರವಾನಗಿಯನ್ನು ರದ್ದುಪಡಿಸಲಾಗುವುದು ಎಂದು ಷರತ್ತನ್ನು 2ನೇ ಎದುರುದಾರರು ವಿಧಿಸಿರುತ್ತಾರೆ.

(7) ದಿನಾಂಕ:26.07.2016ರಂದು ಕಟ್ಟಡವನ್ನು ರಸ್ತೆಗೆ ತಾಗಿ ನಿರ್ಮಾಣ ಮಾಡುತ್ತಿರುವ ಬಗ್ಗೆ ಪಿರ್ಯಾದುದಾರರು ಗ್ರಾಮ ಪಂಚಾಯಿತಿಗೆ ದೂರು ಸಲ್ಲಿಸಿರುತ್ತಾರೆ.

(8) ಸದರಿ ದೂರಿನ ಆಧಾರದ ಮೇಲೆ 2ನೇ ಎದುರುದಾರರು ಸದರಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿರವರಿಗೆ ದಿನಾಂಕ:01.09.2016ರಂದು 28.09.2016ರಂದು ಮತ್ತು 21.02.2017ರಂದು ನೋಟೀಸುಗಳನ್ನು ನೀಡಿ ನಕ್ಷೆಯಲ್ಲಿ ಸೂಚಿಸಿದ ರಸ್ತೆ ಮಾರ್ಜಿನ್ ಸ್ಥಳವನ್ನು ಬಿಡದೆ ಕಟ್ಟಡ ಕಟ್ಟುತ್ತಿದ್ದು ಕಾಮಗಾರಿ ನಿಲ್ಲಿಸಲು ಸೂಚಿಸಿರುತ್ತಾರೆ.

(9) ಸದರಿ ರಸ್ತೆ ಜಾಗವನ್ನು ಸ್ಥಳೀಯ ಸಂಸ್ಥೆಗೆ ಲಿಖಿತವಾಗಿ ಬಿಟ್ಟು ಕೊಟ್ಟ ನಂತರವೇ ಅನುಮೋದಿತ ನಕ್ಷೆ ಬಿಡುಗಡೆ ಮಾಡಲು ಅಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ 2ನೇ ಎದುರುದಾರರಿಗೆ ಷರತ್ತು ವಿಧಿಸಿದ್ದರು 2ನೇ ಎದುರುದಾರರು ಈ ಬಗ್ಗೆ ಸೂಕ್ತ ಕ್ರಮ ಜರುಗಿಸದೇ ಇರುವುದು ಕಂಡುಬಂದಿರುತ್ತದೆ. ಕಟ್ಟಡ ಕಟ್ಟುವ ಅವಧಿಯಲ್ಲಿ ಪರವಾನಗಿ ರದ್ದುಪಡಿಸಿ ಕಟ್ಟಡ ಕಟ್ಟದಂತೆ ನಿಲ್ಲಿಸುವ ಹೊಣೆಗಾರಿಕೆ 2ನೇ ಎದುರುದಾರರ ಮೇಲಿದ್ದು ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ.

(10) ನೂತನವಾಗಿ ನಿರ್ಮಿಸಿದ ಮೀನುಗಾರರ ಸೌಧವು ದಿನಾಂಕ:02.04.2017ರಂದು ಉದ್ಘಾಟನೆಯಾಗಿದ್ದು, ಕಟ್ಟಡ ನಿರ್ಮಾಣ ಕಾರ್ಯವು ಪೂರ್ಣಗೊಂಡಿದ್ದರೂ 2ನೇ ಎದುರುದಾರರು ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡುಬಂದಿರುತ್ತದೆ.

(11) ವಿಧಿಸಿರುವ ಷರತ್ತಿನಂತೆ ರಸ್ತೆ ಜಾಗವನ್ನು ಸ್ಥಳೀಯ ಸಂಸ್ಥೆಗೆ ಲಿಖಿತವಾಗಿ ಪಡೆಯಲು 2ನೇ ಎದುರುದಾರರು ಕ್ರಮಜರುಗಿಸದೇ ಇರುವುದು ಕಂಡುಬಂದಿರುತ್ತದೆ.

ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ(ನಡತೆ) ನಿಯಮ 1966ರ ನಿಯಮಗಳು 3(1)(ii) & (iii) ರನ್ವಯ 2ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, 2ನೇ ಎದುರುದಾರರಾದ ಶ್ರೀಮತಿ ಸುಮನ ಕೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, 80 ಬಡಗಬೆಟ್ಟು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14-ಎರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಲೋಕಾಯುಕ್ತ ಸಂಸ್ಥೆಗೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಶ್ರೀಮತಿ ಸುಮನ ಕೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, 80 ಬಡಗಬೆಟ್ಟು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/100/ಗ್ರಾಪಂಕಾ/2019**
**ಬೆಂಗಳೂರು, ದಿನಾಂಕ: 04-07-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಸುಮನ ಕೆ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, 80 ಬಡಗಬೆಟ್ಟು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಕರ್ನಾಟಕ ನಾಗರೀಕ ಸೇವಾ(ನಡವಳಿ) ನಿಯಮಗಳು 3(1)(ii) & (iii)ರನ್ವಯ "ದುರ್ನಡತೆ" ಎಸಗಿರುವುದು ಸಾಬೀತಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಈ ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)ನಿಯಮಗಳು, 1957ರ ನಿಯಮ 8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

4/7

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1) ಮಹಾಲೇಖಪಾಲರು(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು(ಮೂಲ ದಾಖಲೆಗಳು ಪುಟ ಸಂಖ್ಯೆ: 1 ರಿಂದ 79ನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ.
6) ಶ್ರೀಮತಿ ಕೆ. ಸುಮನ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, 80 ಬಡಗಬೆಟ್ಟು ಗ್ರಾಮ ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
7) ಗಣಕ ಕೋಶ.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.